**ಸಾಕ್ಷಿಯನ್ನು ದಿನಾಂಕಃ 19.09.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 10 ರಿಂದ 19 ನೇ ಪ್ರತಿವಾದಿಗಳ ಪರ ಶ್ರೀ. ಕೆ.ಜಿ. ವಕೀಲರಿಂದಃ**

ನನ್ನ ಗಂಡನ ಹೆಸರು ಪುಟ್ಟಮಾದಯ್ಯ. ಕಪನಯ್ಯ ನನಗೆ ತಂದೆಯಾಗಬೇಕು. ನನ್ನ ಅಜ್ಜ ಜವರಯ್ಯ ಅಂದರೆ ಸದರಿ ಜವರಯ್ಯ ನನ್ನ ತಂದೆಯ ತಂದೆ ಆಗಿರುತ್ತಾರೆ. ಜವರಯ್ಯುರವರ ತಾತನ ಹೆಸರು ಹನುಮಯ್ಯ. ನಾವು ಹನುಮಯ್ಯುರವರ ಕುಟುಂಬದವರು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತುಗಳು ನನ್ನ ತಾತನ ಮೂಲಕ ತಂದೆಗೆ ಬಂದಿರುತ್ತವೆ. ಇದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವೆ ಸಲ್ಲಿಸಲು ವಕೀಲರಿಗೆ ನಾವೇ ಮಾಹಿತಿ ನೀಡಿರುತ್ತೇವೆ. ದಾವೆ ಸಲ್ಲಿಸುವ ಸಮಯದಲ್ಲಿ ನನ್ನ ಮೈದುನ ಬದುಕಿದ್ದರು. ಲಿಂಗಾಜಮ್ಮ ಕೋಂ ಅಣ್ಣೇಗೌಡರವರು 04 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿದ್ದರು. ನನ್ನ ತಂದೆ ಮತ್ತು ಅವರ ಸಹೋದರ ಹನುಮಯ್ಯುರವರ ನಡುವೆ ವಿಭಾಗವಾಗಿದ್ದು, ನನ್ನ ತಂದೆಗೆ 04 ಎಕರೆ ಜಮೀನು ವಿಭಾಗದ ಮೂಲಕ ಬಂದಿರುತ್ತದೆ. ನಮಗು ಮತ್ತು ದಾವಾ ಸ್ವತ್ತಿಗು ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಜವರಯ್ಯ ಮತ್ತು ಹೆಜ್ಜೂರಯ್ಯುರವರು ದಿನಾಂಕಃ 30.04.1975 ರಂದು 10 ರಿಂದ 19 ನೇ ಪ್ರತಿವಾದಿಗಳ ತಾಯಿ ಲಿಂಗಾಜಮ್ಮರವರಿಗೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿ ಆದರೆ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ಸದರಿ ಸ್ವತ್ತನ್ನು ಸದರಿ ಜವರಯ್ಯುರವರು ದಿನಾಂಕಃ 23.10.1944 ರಂದು ಹೆತ್ತೇಗೌಡರ ಮಗ ಕೋಡೀಗೌಡರವರಿಂದ ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಿನಾಂಕಃ 30.04.1975 ರಂದು ಕ್ರಯ ಪತ್ರ ಮಾಡಿಕೊಡುವ ಸಮಯದಲ್ಲಿ ಜವರಯ್ಯುರವರ ಮಗ ಹೆಜ್ಜೂರಯ್ಯುರವರು ತಾನೇ ಜವರಯ್ಯ ಎಂದು ಸಹಿ ಹಾಕಿ ಮಾರಾಟ ಮಾಡಿರುತ್ತಾರೆಂದು ಹೇಳಿದ್ದು, ಇದರ ಬಗ್ಗೆ

ಯಾವುದೇ ದೂರನ್ನಾಗಲೀ ಅಥವಾ ಇತರೇ ಕ್ರಮಗಳನ್ನು ಕೈಗೊಂಡಿಲ್ಲ. ಲಿಂಗಾಜಮ್ಮ ಮೃತಪಟ್ಟ ನಂತರ ಅವರ ವಾರಸುದಾರರಿಗೆ ಪೌತಿ ಖಾತೆಯಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಲಿಂಗಾಜಮ್ಮ ಮತ್ತು ಅವರ ವಾರಸುದಾರರ ಹೆಸರಿಗೆ ಆಗಿರುವ ಖಾತೆಯನ್ನು ಕಂದಾಯ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುವುದಿಲ್ಲ. ನನಗೆ 40 ವರ್ಷ ಪ್ರಾಯವಿರುವಾಗ ಲಿಂಗಾಜಮ್ಮರವರಿಗೆ ಮಾರಾಟ ಮಾಡಿರುವ ವಿಷಯ ನನಗೆ ಗೊತ್ತಾಗಿರುತ್ತದೆ. ನಾನು ಮದುವೆಯಾಗಿ 50 ವರ್ಷವಾಗಿರುತ್ತದೆ. ಈಗ ನನಗೆ 57 ವರ್ಷ ಪ್ರಾಯವಾಗಿರುತ್ತದೆ. ನಾವು ಒಟ್ಟು 04 ಎಕರೆ ಜಮೀನಿಗೆ ದಾವೆ ಸಲ್ಲಿಸಿರುತ್ತೇವೆ. ದಾವಾ ಸ್ವತ್ತಿನ ಚೆಕ್ ಬಂದಿಯನ್ನು ನನಗೆ ಹೇಳಲಾಗುವುದಿಲ್ಲ. ಲಿಂಗಾಜಮ್ಮರವರ ವಾರಸುದಾರರು 20 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂ ದರೆ ಮಾರಾಟ ಮಾಡಿರುತ್ತಾರೆ. ದಾವಾ ಸ್ವತ್ತು ವಿಭಾಗವಾಗತಕ್ಕ ಆಸ್ತಿಯಾಗಿರುವುದಿಲ್ಲ ಮತ್ತು ದಾವಾ ಸ್ವತ್ತಿಗು ಮತ್ತು ನಮಗು ಯಾವುದೇ ಹಕ್ಕು-ಹಿತಾಸಕ್ತಿವಿರುವುದಿಲ್ಲವೆಂದರೆ ಸರಿಯಲ್ಲ.

**ಪಾಟೀ ಸವಾಲುಃ 21 ನೇ ಪ್ರತಿವಾದಿಯ ಪರ ಶ್ರೀಮತಿ. ಹೆಚ್.ವಿ.ಎಸ್. ವಕೀಲರಿಂದಃ**

ನನ್ನ ತಂದೆಯ ಹೆಸರು ಕಪನಯ್ಯ. ಆಸ್ತಿ ಬೇಕೆಂದು ಈ ದಾವೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತು ಮೂಲತಃ ಜವರಯ್ಯರವರ ಹೆಸರಿನಲ್ಲಿತ್ತು. ಜವರಯ್ಯರವರ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಹೆತ್ತೇಗೌಡರ ಮಗ ಕೋಡೀಗೌಡರ ಸ್ವಯಾರ್ಜಿತ ಸ್ವತ್ತಾಗಿರುವುದರಿಂದ ನಮಗು ಮತ್ತು ದಾವಾ ಸ್ವತ್ತಿಗು ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ಹನುಮಂತಯ್ಯರವರ ಕುಟುಂಬಕ್ಕು ಮತ್ತು ನಮ್ಮ ಕುಟುಂಬಕ್ಕು ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ಹನುಮಂತಯ್ಯರವರಿಗೆ ಹನುಮಯ್ಯ, ಹೆಜ್ಜೂರಯ್ಯ

ಮತ್ತು ಸಣ್ಣಪ್ಪಯ್ಯ ಎಂಬ ಮಕ್ಕಳಿದ್ದರು. ಈ ವಿಚಾರವನ್ನು ವಾದಪತ್ರದಲ್ಲಿ ಹೇಳಿರುವುದಿಲ್ಲ. ದಿನಾಂಕಃ 30.04.1975 ರಂದು ಜವರಯ್ಯ ಮತ್ತು ಅವರ ಮಗ ಹೆಜ್ಜೂರಯ್ಯರವರು ಲಿಂಗಾಜಮ್ಮರವರಿಗೆ ದಾವಾ ಸ್ವತ್ತುನ್ನು ಮಾರಾಟ ಮಾಡಿರುತ್ತಾರೆಂದರೆ ಕಪನಯ್ಯ ಮತ್ತು ಹೆಜ್ಜೂರಯ್ಯರವರು ಮಾರಾಟ ಮಾಡಿರುತ್ತಾರೆ. ಲಿಂಗಾಜಮ್ಮರವರು 20 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಂತರ 20 ನೇ ಪ್ರತಿವಾದಿ 21 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದು, ಪ್ರಸ್ತುತ 21 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾ ಸ್ವತ್ತು ಹೊನ್ನೂರುಕುಪ್ಪೆ ಗ್ರಾಮದಲ್ಲಿರುತ್ತದೆ. ದಾವಾ ಸ್ವತ್ತಿನಲ್ಲಿ ಯಾರು ಕೂಡ ವ್ಯವಸಾಯ ಮಾಡುತ್ತಿಲ್ಲ. 21 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಸದರಿ ಕ್ರಯ ಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ. ದಾವಾ ಸ್ವತ್ತು ಜವರಯ್ಯರವರ ಸ್ವಯಾರ್ಜಿತ ಸ್ವತ್ತಾಗಿರುವುದರಿಂದ ದಾವಾ ಸ್ವತ್ತಿನಲ್ಲಿ ನನಗೆ ಭಾಗ ಕೇಳಲು ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ಸುಳ್ಳು ವಂಶವೃಕ್ಷ ತೋರಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರು ದಾವಾ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**